ಸಾಕ್ಷಿಯ ಹೆಸರುಃ ನರಸಿಂಹರಾಜು ಎನ್.

ದಿನಾಂಕಃ **17-03-2023** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ 1 ಮತ್ತು 2 ನೇ ಪ್ರತಿವಾದಿಗಳ ಪರ ಶ್ರೀ ಎಂ.ಸಿ.ಎಸ್. ವಕೀಲರಿಂದಃ**

ನಾನು ಕೆಲಸ ಮಾಡುತ್ತಿರುವ ಕಂಪನಿ ಬೆಂಗಳೂರಿನ ಕಾಮಾಕ್ಷಿ ಪಾಳ್ಯದಲ್ಲಿದೆ. ನಾನೂ ಕೂಡ ಬೆಂಗಳೂರಿನವನು. ನನ್ನನ್ನು ಸಾಕ್ಷಿ ಹೇಳಲು ವಾದಿ ಕುಮಾರಸ್ವಾಮಿ ಕರೆದುಕೊಂಡು ಬಂದಿರುತ್ತಾರೆ. ಸದರಿ ಕುಮಾರಸ್ವಾಮಿಯವರು ಹೇಳಿದ ಆಧಾರದ ಮೇಲೆ ನಾನು ಸಾಕ್ಷಿ ನುಡಿಯಲು ಬಂದಿರುತ್ತೇನೆ ಎಂದರೆ ಸರಿ. ನಿಪಿ-01 ಕ್ಕೆ ನಾನು ಸಹಿ ಮಾಡಿರುವುದಿಲ್ಲ. ಸದರಿ ನಿಪಿ-01 ನ್ನು ಮಾಡುವಾಗ ನಾನು ನೊಂದಣಿ ಕಚೇರಿಯಲ್ಲಿ ಹಾಜರಿರಲಿಲ್ಲ ಎಂದರೆ ಸರಿ. ನಿಪಿ-01 ನ್ನು ಮಾಡುವ ದಿನ ನಾನು ಹಾಜರಿಲ್ಲದ ಕಾರಣ, ಆ ದಿನ ಏನೇನು ನಡೆದಿತ್ತು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನಿಪಿ-01 ಕ್ರಯದ ಕರಾರುಪತ್ರವನ್ನು ನಾನು ಓದಿಲ್ಲ, ಆದರೆ ತಿಳಿದುಕೊಂಡಿರುತ್ತೇನೆ.

2) ಎಲ್ಲ ಪ್ರತಿವಾದಿಯರು ನನಗೆ ಗೊತ್ತು. ವಾದಿ ಮತ್ತು ಪ್ರತಿವಾದಿಯರ ಮಧ್ಯೆ ಮಾಡಿಕೊಂಡ ವ್ಯವಹಾರದ ಸ್ವತ್ತಿನ ಚೆಕ್ ಬಂದಿ ಹೇಳಲು ಬರುತ್ತದೆಯೇ ಎಂದರೆ ಸಾಕ್ಷಿ ಬರುತ್ತದೆ ಎನ್ನುತ್ತಾರೆ. ಸದರಿ ಸ್ವತ್ತಿನ ಪೂರ್ವಕ್ಕೆ ಕುಮಾರ್ ರವರ ಜಮೀನು, ಪಶ್ಚಿಮಕ್ಕೆ ಜಯಮ್ಮರವರ ಬೇರೆ ಸರ್ವೆ ನಂಬರಿನಲ್ಲಿರುವ ಜಮೀನು, ಉತ್ತರಕ್ಕೆ ಕುಮಾರ್ ರವರ ಜಮೀನು ಮತ್ತು ದಕ್ಷಿಣಕ್ಕೆ ಬೋರೇಗೌಡರ ಜಮೀನು ಇರುತ್ತದೆ. ಸದರಿ ಜಯಮ್ಮ ರವರಿಗೆ 06 ಜನ ಮಕ್ಕಳು. ದಾವಾಸ್ವತ್ತು ಜಯಮ್ಮ ರವರ ಗಂಡನ ಪಿತ್ರಾರ್ಜಿತ ಸ್ವತ್ತು ಎಂದರೆ ಸರಿ. ಆ ಸ್ವತ್ತಿನಲ್ಲಿ 06 ಜನ ಮಕ್ಕಳಿಗೆ ಹಕ್ಕು ಇದೆ ಎಂದರೆ ಸರಿ. ಜಯಮ್ಮರವರ

ಎಲ್ಲ ಮಕ್ಕಳು ಈ ಕ್ರಯದ ಕರಾರುಪತ್ರಕ್ಕೆ ಸಹಿ ಹಾಕಿಲ್ಲ ಎಂದರೆ ಸರಿ. ದಾವಾಸ್ವತ್ತನ್ನು ಮಾರಾಟ ಮಾಡಲು ಅಥವಾ ಕ್ರಯದ ಕರಾರು ಪತ್ರ ಬರೆದುಕೊಡಲು ಜಯಮ್ಮರವರಿಗೆ ವೈಯಕ್ತಿಕವಾದ ಮತ್ತು ಸ್ವತಂತ್ರವಾದ ಹಕ್ಕು ಇಲ್ಲ ಎಂದರೆ ಸರಿ.

3) ನಾನು ಮತ್ತು ವಾದಿ ಒಂದೇ ಊರಿನಲ್ಲಿ ವಾಸವಾಗಿರುವ ಕಾರಣ, ನಾನು ಅವರ ಪರವಾಗಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 3 ರಿಂದ 7 ನೇ ಪ್ರತಿವಾದಿಗಳ ಪರ ಶ್ರೀ ಕೆ.ಪಿ .ಎಂ. ವಕೀಲರಿಂದಃ**

4) ಸಾಮಾನ್ಯವಾಗಿ ಫ್ಯಾಕ್ಟರಿ ಮಾಡಬೇಕಾದಂತಹ ಸ್ಥಳ ಮುಖ್ಯ ರಸ್ತೆಗೆ ಹತ್ತಿರವಾಗಿರಬೇಕು ಮತ್ತು ನೀರಿನ ವ್ಯವಸ್ಥೆ ಇರಬೇಕು ಎಂದರೆ ಸಾಕ್ಷಿ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಈ ಕುರಿತು ನಾನು ಹೇಳಿಲ್ಲ ಎನ್ನುತ್ತಾರೆ. ದಾವಾಸ್ವತ್ತನ್ನು ನಾನು ವಾದಿಗೆ ತೋರಿಸಿದಾಗ, ಜಯಮ್ಮರವರಿಗೆ ವಾರಸುದಾರರು ಇದ್ದಾರೆ ಎಂದು ನನಗೆ ಗೊತ್ತಿತ್ತು. ಆ ಸಮಯದಲ್ಲಿ ದಾವಾಸ್ವತ್ತು ಜಯಮ್ಮರವರ ಯಜಮಾನರಾದ ನಂಜೇಗೌಡರ ಪಿತ್ರಾರ್ಜಿತ ಸ್ವತ್ತಾಗಿತ್ತು ಎಂದು ನನಗೆ ಗೊತ್ತಿತ್ತು. ಈ ವಿಷಯವನ್ನು ನಾನು ವಾದಿಗೆ ಹೇಳಿದ್ದೆ. ದಾವಾಸ್ವತ್ತು 04 ಎಕರೆ 20 ಗುಂಟೆ ಜಮೀನಾಗಿದ್ದು, ಅದರ ಬೆಲೆ ಎಕರೆಗೆ ರೂ.10 ಲಕ್ಷ ಬೆಲೆ ಬಾಳುತ್ತಿತ್ತು ಎಂದರೆ ಸಾಕ್ಷಿ ಆ ಸಮಯದಲ್ಲಿ ಅಷ್ಟು ಬೆಲೆ ಬಾಳುತ್ತಿರಲಿಲ್ಲ ಹಾಗೂ ರೂ.3 ಲಕ್ಷ ಪ್ರತಿ ಎಕರೆಗೆ ಬೆಲೆ ಇತ್ತು ಎನ್ನುತ್ತಾರೆ. ನಿಪಿ-01 ಉಳಿದ ವಾರಸುದಾರರು ಇಲ್ಲದೇ ಮಾಡಿಕೊಂಡ ಕ್ರಯಪತ್ರವಾಗಿದ್ದರಿಂದ ಅದು ಊರ್ಜಿತವೇ ಎಂದರೆ ಸಾಕ್ಷಿ ಅದಕ್ಕೆ 1 ಮತ್ತು 2 ನೇ ಪ್ರತಿವಾದಿಯರು ಸಹಿ ಹಾಕಿರುತ್ತಾರೆ ಎನ್ನುತ್ತಾರೆ.

5) ಆ ಸಮಯದಲ್ಲಿ ದಾವಾಸ್ವತ್ತಿನ ಬೆಲೆ ಎಕರೆಗೆ 10 ರಿಂದ 15 ಲಕ್ಷ ರೂಪಾಯಿ ಬೆಲೆ ಬಾಳುತ್ತಿತ್ತು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಈ ವ್ಯವಹಾರ ಮಾರಾಟ ಮಾಡುವ ಉದ್ದೇಶವಿದ್ದರೆ ಅಂದಿನ ಬೆಲೆ ಏನಿತ್ತು ಆ ಬೆಲೆಗೆ ಕ್ರಯದ ಕರಾರುಪತ್ರವನ್ನು ಮಾಡಿಕೊಂಡು, ಉಳಿದ ವಾರಸುದಾರರ ಸಹಿಗಳನ್ನು ಕೂಡ ಮಾಡಿಸಿಕೊಡುತ್ತಿದ್ದರು ಎಂದರೆ ಸುಳ್ಳು. ದಾವಾಸ್ವತ್ತನ್ನು ಪ್ರತಿವಾದಿಯ ಕುಟುಂಬದವರು ವಿಭಾಗ ಮಾಡಿಕೊಂಡಿರುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. ದಾವಾಸ್ವತ್ತನ್ನು ಅವರು ವಿಭಾಗ ಮಾಡಿಕೊಳ್ಳದ ಕಾರಣ ಹಾಗೂ 1 ನೇ ಪ್ರತಿವಾದಿಯ ಎಲ್ಲಾ ವಾರಸುದಾರರು ಸಹಿ ಮಾಡದ ಕಾರಣ, ನಿಪಿ-01 ಕ್ರಯದ ಕರಾರುಪತ್ರ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ. ನಾನು, ವಾದಿ, 1 ಮತ್ತು 2 ನೇ ಪ್ರತಿವಾದಿಯರು ಸೇರಿ ಉಳಿದ ಪ್ರತಿವಾದಿಯರಿಗೆ ಮೋಸ ಮಾಡುವ ಉದ್ದೇಶದಿಂದ ನಿಪಿ-01 ನ್ನು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ವಾದಿ ಎಷ್ಟು ವರ್ಷಗಳಿಂದ ಹಣಕಾಸಿನ ವ್ಯವಹಾರ ಮಾಡುತ್ತಿದ್ದಾರೆ ಎಂದರೆ ಸಾಕ್ಷಿ ಅವರು ಹಣದ ವ್ಯವಹಾರ ಮಾಡುವುದಿಲ್ಲ ಎನ್ನುತ್ತಾರೆ.

**ಪಾಟೀ ಸವಾಲು 8 ಮತ್ತು 9 ನೇ ಪ್ರತಿವಾದಿಯರು ಏಕಪಕ್ಷೀಯವಾಗಿರುತ್ತಾರೆ.**

**ಮರು ವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ.